# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು | : | ಶ್ರೀ ಅರವಿಂದ ಕುಮಾರ್ ಅರಳಿ (ವಿಧಾನಸಭೆಯಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 147 |
| ಉತ್ತರಿಸಬೇಕಾದ ದಿನಾಂಕ | : | 05-12-2023 |
| ಉತ್ತರಿಸಬೇಕಾದ ಸಚಿವರು | : | ಸಹಕಾರ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ಸಹಕಾರಿ ಬ್ಯಾಂಕುಗಳಿಂದ ರೈತರಿಗೆ ಶೂನ್ಯ ಬಡ್ಡಿದರದಲ್ಲಿ ಈ ಹಿಂದೆ ನೀಡುತ್ತಿದ್ದ ಸಾಲದ ಮೊತ್ತ ಎಷ್ಟು; ಸದರಿ ಮೊತ್ತವನ್ನು ಹೆಚ್ಚಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಹಾಗಿದ್ದಲ್ಲಿ, ಎಷ್ಟು ಪ್ರಮಾಣದಲ್ಲಿ ಹೆಚ್ಚಿಸಲಾಗುವುದು; | 2022-23 ನೇ ಸಾಲಿನಲ್ಲಿ ಸಹಕಾರ ಸಂಘ/ಬ್ಯಾಂಕುಗಳ ಮೂಲಕ ರೈತರಿಗೆ ಶೂನ್ಯ ಬಡ್ಡಿ ದರ ಅನ್ವಯವಾಗುವಂತೆ ವಿತರಿಸುವ ಅಲ್ಪಾವಧಿ ಕೃಷಿ ಸಾಲದ ಗರಿಷ್ಟ ಮಿತಿ ರೂ.3.00 ಲಕ್ಷಗಳಾಗಿತ್ತು.<br><br>2023-24 ನೇ ಸಾಲಿಗೆ ಈ ಮಿತಿಯನ್ನು ರೂ.5.00 ಲಕ್ಷಗಳಿಗೆ ಹೆಚ್ಚಿಸಿ ಸರ್ಕಾರ ಆದೇಶ ಸಂಖ್ಯೆ: ಸಿಒ 167 ಸಿಎಲ್‌ಎಸ್ 2023, ದಿನಾಂಕ.08-09-2023 ರಲ್ಲಿ ಆದೇಶ ಹೊರಡಿಸಲಾಗಿದೆ. |
| ಆ) | ಸಹಕಾರಿ ಬ್ಯಾಂಕುಗಳಿಂದ ಈ ಹಿಂದೆ ನೀಡುತ್ತಿದ್ದ ದೀರ್ಘಾವಧಿ ಸಾಲದ ಪ್ರಮಾಣ ಎಷ್ಟು; ಸದರಿ ಮೊತ್ತವನ್ನು ಹೆಚ್ಚಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಹಾಗಿದ್ದಲ್ಲಿ, ಎಷ್ಟು ಮೊತ್ತವನ್ನು ಹೆಚ್ಚಿಸಲಾಗುವುದು; | 2022-23 ನೇ ಸಾಲಿನಲ್ಲಿ ಸಹಕಾರ ಸಂಘ/ಬ್ಯಾಂಕುಗಳ ಮೂಲಕ ರೈತರಿಗೆ ಶೇ.3 ರ ಬಡ್ಡಿ ದರ ಅನ್ವಯವಾಗುವಂತೆ ವಿತರಿಸುವ ಮಧ್ಯಮಾವಧಿ ಹಾಗೂ ದೀರ್ಘಾವಧಿ ಕೃಷಿ ಸಾಲದ ಗರಿಷ್ಟ ಮಿತಿ ರೂ.10.00 ಲಕ್ಷಗಳಾಗಿತ್ತು.<br><br>2023-24 ನೇ ಸಾಲಿಗೆ ಈ ಮಿತಿಯನ್ನು ರೂ.15.00 ಲಕ್ಷಗಳಿಗೆ ಹೆಚ್ಚಿಸಿ ಸರ್ಕಾರ ಆದೇಶ ಸಂಖ್ಯೆ: ಸಿಒ 167(1) ಸಿಎಲ್‌ಎಸ್ 2023 ದಿನಾಂಕ:08-09-2023 ರಲ್ಲಿ ಆದೇಶ ಹೊರಡಿಸಲಾಗಿದೆ. |
| ಇ) | ಕೃಷಿ ಸಾಲದ ಗುರಿಯನ್ನು ಹೆಚ್ಚಿಸುವ ಉದ್ದೇಶ ಸರ್ಕಾರದ ಮುಂದಿದೆಯೇ; ಹಾಗಿದ್ದಲ್ಲಿ ಯಾವ ಪ್ರಮಾಣದಲ್ಲಿ ಹೆಚ್ಚಿಸಲಾಗುವುದು? | 2022-23 ನೇ ಸಾಲಿಗೆ 33 ಲಕ್ಷ ರೈತರಿಗೆ ರೂ.24,000 ಕೋಟಿ ಸಾಲ ವಿತರಿಸುವ ಗುರಿ ನಿಗದಿಪಡಿಸಲಾಗಿತ್ತು. ಇದುವರೆವಿಗೂ ಸಹಕಾರ ಸಂಘಗಳು 30.11 ಲಕ್ಷ ರೈತರಿಗೆ ರೂ.23,529.70 ಕೋಟಿ ಕೃಷಿ ಸಾಲ ವಿತರಿಸಿರುತ್ತವೆ.<br><br>2023-24 ನೇ ಸಾಲಿಗೆ ಸಾಲದ ಗುರಿಯನ್ನು ಹೆಚ್ಚಿಸಿ 34.40 ಲಕ್ಷ ರೈತರಿಗೆ ರೂ.23,000 ಕೋಟಿ ಅಲ್ಪಾವಧಿ ಕೃಷಿ ಸಾಲ ಮತ್ತು 0.64 ಲಕ್ಷ ರೈತರಿಗೆ ರೂ.1700 ಕೋಟಿ ಮಧ್ಯಮಾವಧಿ ಹಾಗೂ ದೀರ್ಘಾವಧಿ ಕೃಷಿ ಸಾಲ ಹೀಗೆ ಒಟ್ಟು 35.04 ಲಕ್ಷ ರೈತರಿಗೆ ರೂ.24,700 ಕೋಟಿಗಳ ಕೃಷಿ ಸಾಲ ವಿತರಿಸುವ ಗುರಿ ನಿಗದಿಪಡಿಸಿದೆ. |

**ಸಂಖ್ಯೆ: ಸಿಒ 246 ಸಿಎಲ್‌ಎಸ್ 2023**

K. N. Rajanna

**(ಕೆ.ಎನ್.ರಾಜಣ್ಣ)**
**ಸಹಕಾರ ಸಚಿವರು**